# ಕರ್ನಾಟಕರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025

**ನ್ಯಾಕ 'ಎ' ಶ್ರೇಣಿ ಮಾನ್ಯತೆ**

ದೂರವಾಣಿ ಸಂಖ್ಯೆ : 0836–2222392 ಜಾಲತಾಣ : www.kslu.ac.in

ಫ್ಯಾಕ್ಸ್ : 0836–2223392 ಇ–ಮೇಲ್ : kslu.affiliation2009@gmail.com


ಸಂ: ಕರಾಕಾವಿ/ವಿ.ಮಂ./ಬಿ.ಓ.ಎಸ್.(ಯು.ಜಿ.)/ಪಠ್ಯಕ್ರಮ/2018–19/2453 ದಿ: 30.01.2019.

31

## : ಸುತ್ತೋಲೆ :

**ವಿಷಯ:** 2018–19ನೇ ಸಾಲಿಗೆ ಪ್ರವೇಶಾತಿ ಪಡೆದ 5ವರ್ಷದ ಬಿ.ಎ/ಬಿ.ಬಿ.ಎ/ಬಿ.ಕಾಂ.,ಎಲ್‌ಎಲ್.ಬಿ. ಹಾಗೂ 3ವರ್ಷದ ಕಾನೂನು ಕೋರ್ಸುಗಳಿಗೆ **"ಕನ್ನಡ ಕಲಿ"** ವಿಷಯವನ್ನು ಪಠ್ಯಕ್ರಮದಲ್ಲಿ ಅಳವಡಿಸಿರುವ ಕುರಿತು.

**ಉಲ್ಲೇಖ:** 1.ಕರಾಕಾವಿಯ ವಿಶೇಷ ಬಿ.ಓ.ಎಸ್. (ಯು.ಜಿ.) ಸಭೆಯ ದಿನಾಂಕ 16.07.2018.

2. ಪ್ರಶಾಸನ ಸಭೆಯ ಅನುಮೋದನೆಯ ದಿನಾಂಕ: 04.08.2018, ಗೊತ್ತುವಳಿ ಸಂಖ್ಯೆ: 09
3. ಈ ಕಛೇರಿ ಸುತ್ತೋಲೆ ಸಂಖ್ಯೆ: ಕರಾಕಾವಿ/ವಿ.ಮಂ./ಬಿ.ಓ.ಎಸ್. (ಯು.ಜಿ.)/ಪಠ್ಯಕ್ರಮ/ 2018–19/1291, ದಿನಾಂಕ: 09.08.2018.
4. ವೃತ್ತಿಪರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕನ್ನಡ ಮತ್ತು ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಭೋಧಿಸಲು ಪ್ರತ್ಯೇಕ ಪಠ್ಯಕ್ರಮಗಳನ್ನು ಸಿದ್ಧಪಡಿಸುವ ಸಭೆಯ ದಿನಾಂಕ: 24.01.2019.
5. ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ:29.01.2019.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಈ ಮೂಲಕ ಸಂಯೋಜಿತ ಎಲ್ಲ ಕಾನೂನು ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ತಿಳಿಯಪಡಿಸುವದೇನೆಂದರೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಅಡಿಯಲ್ಲಿ 2018–19ನೇ ಸಾಲಿನಿಂದ 5ವರ್ಷದ ಬಿ.ಎ/ಬಿ.ಬಿ.ಎ/ಬಿ.ಕಾಂ.,ಎಲ್‌ಎಲ್.ಬಿ.ಹಾಗೂ 3ವರ್ಷದ ಕಾನೂನು ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಲ್ಲಿ ಯಾವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಮಟ್ಟದಲ್ಲಿ ಕನ್ನಡವನ್ನು ಅಧ್ಯಯನ ಮಾಡಿರುತ್ತಾರೆ ಅಂತಹ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ **"ಕನ್ನಡ"** ವಿಷಯವನ್ನು ಹಾಗೂ ಕನ್ನಡೇತರ ವಿದ್ಯಾರ್ಥಿಗಳು **"ಕನ್ನಡ ಕಲಿ"** ವಿಷಯವನ್ನು ಅಳವಡಿಸಲಾಗಿದೆ, ಈಗಾಗಲೇ ಉಲ್ಲೇಖ 3ರ ಮೂಲಕ **"ಕನ್ನಡ"** ವಿಷಯದ ಪಠ್ಯಕ್ರಮವನ್ನು ಪ್ರಕಟಿಸಲಾಗಿದೆ. ಮುಂದುವರೆದು ಸದರಿ ಸುತ್ತೋಲೆಯಲ್ಲಿ ತಿಳಿಸಿದಂತೆ **"ಕನ್ನಡ ಕಲಿ"** ವಿಷಯದ ಪಠ್ಯಕ್ರಮವನ್ನು **Appendix-VIII–A** ಎಂದು ಈ ಸುತ್ತೋಲೆಗೆ ಜೊತೆಗೆ ಲಗತ್ತಿಸಲಾಗಿದೆ. ಸದರಿ ಪಠ್ಯಕ್ರಮವನ್ನು 2018–19ನೇ ಸಾಲಿನಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದು ಈಗ 2ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೋಧಿಸಲು ಈ ಮೂಲಕ ತಿಳಿಸಲಾಗಿದೆ

ಆದ್ದರಿಂದ ಈ ವಿಷಯವನ್ನು ಆಯಾ ವಿಷಯಗಳ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತಂದು ವ್ಯವಸ್ಥಿತವಾಗಿ ಪಠ್ಯಕ್ರಮವನ್ನು ಜಾರಿಗೆ ತರಲು ಈ ಮೂಲಕ ತಿಳಿಸಲಾಗಿದೆ.

**ಕುಲಸಚಿವರು** (ಪ್ರಭಾರ)

ಗೆ,

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಎಲ್ಲ ಕಾನೂನು ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ.

Despatched on 31-01-2019

**Appendix- VIII-A**

ಕನ್ನಡೇತರ ವಿದ್ಯಾರ್ಥಿಗಳಿಗಾಗಿ ರಚಿಸಲಾದ ಪಠ್ಯಕ್ರಮ 2018-19.

**ಕನ್ನಡ ಕಲಿ**

(ಪಠ್ಯಕ್ರಮ)

# KANNADA KALI

**ಉದ್ದೇಶಗಳು:**

ಕನ್ನಡ ಕಲಿ ಎಂಬ ಈ ಭಾಷೆಯ ಪಠ್ಯವನ್ನು ವೃತ್ತಿ ಪದವಿಯ ಶಿಕ್ಷಣ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ಕನ್ನಡೇತರ ವಿದ್ಯಾರ್ಥಿಗಳಿಗಾಗಿ ರಚಿಸಲಾಗಿದೆ. ಹೊರ ರಾಜ್ಯಗಳಿಂದ ನಮ್ಮಲ್ಲಿ ಶೈಕ್ಷಣಿಕ ವ್ಯಾಸಂಗಕ್ಕಾಗಿ ಬರುವ ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯ ಜ್ಞಾನ ಅತ್ಯವಶ್ಯಕವಾಗಿರುವುದರಿಂದ, ಕ.ರಾ.ಕಾ.ವಿಯ ವ್ಯಾಪ್ತಿಗೆ ಒಳಪಡುವಂತಹ ಕಾನೂನು ಮಹಾವಿದ್ಯಾಲಯಗಳಲ್ಲಿ ಕನ್ನಡ ಭಾಷಾಜ್ಞಾನವನ್ನು ಕಡ್ಡಾಯಗೊಳಿಸುವ ಸದುದ್ದೇಶದಿಂದ ಪಠ್ಯಕ್ರಮದಲ್ಲಿ **"ಕನ್ನಡ ಕಲಿ"** ಎಂಬ ಪುಸ್ತಕವನ್ನು ನಿಗದಿಪಡಿಸಲಾಗಿದೆ.

ಕನ್ನಡೇತರ ವಿದ್ಯಾರ್ಥಿಗಳ ಅಧ್ಯಯನಕ್ಕೆಂದು ರಚಿಸಲಾಗಿರುವ ಕನ್ನಡ ಕಲಿ ಪಠ್ಯವನ್ನು ಈ ಕ್ಷೇತ್ರದಲ್ಲಿ ಪರಿಣಿತರಾದ ಡಾ. ಲಿಂಗದೇವರು ಹಳೆಮನೆ ಅವರು ವಿಶೇಷ ಪರಿಶ್ರಮದಿಂದ ಮತ್ತು ಈ ಕ್ಷೇತ್ರದ ತಮ್ಮ ಸುದೀರ್ಘ ಅನುಭವದಿಂದ ತುಂಬ ಆಸಕ್ತಿ ವಹಿಸಿ ರಚಿಸಿ ಕೊಟ್ಟಿದ್ದಾರೆ. ಕನ್ನಡ ಭಾಷೆಯನ್ನು ಅತ್ಯಂತ ಸುಗಮವಾಗಿ ಕಲಿಯಲು, ಪ್ರಯೋಗಿಸಲು ಮತ್ತು ಅದರಲ್ಲಿ ವ್ಯವಹರಿಸಲು ಮತ್ತು ಆ ಮೂಲಕ ತಮ್ಮ ವಿಷಯ ಕ್ಷೇತ್ರದಲ್ಲಿ ಈ ನಾಡವರೊಡನೆ ಅರ್ಥಪೂರ್ಣ ಸಂಪರ್ಕ ಮತ್ತು ಸಂವಹನವನ್ನು ಸಾಧಿಸಲು ನೆರವಾಗುವ ರೀತಿಯಲ್ಲಿ ಇದು ರಚಿತವಾಗಿದೆ.

| **Part I : Structure** (ಕನ್ನಡ ಭಾಷೆಯ ಸಂರಚನೆಯನ್ನು ತಿಳಿಸಲಾಗಿದೆ) |
|---|
| **ಘಟಕ 1 (Unit 1):**<br>**Lesson 1 to Lesson 5:** |
| **ಘಟಕ 2(Unit 2):**<br>**Lesson 6 to Lesson 10:** |
| **ಘಟಕ 3(Unit 3):**<br>**Lesson 11 to Lesson 15:** |
| **ಘಟಕ 4(Unit 4):**<br>**Lesson 16 to Lesson 20:** |
| **ಘಟಕ 5(Unit 5):**<br>**Part II : Kannada Script** (ಕೇಳುವ ಮತ್ತು ಕಲಿಯುವ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವ ಗುರಿಯನ್ನು ಹೊಂದಿದೆ) |

ಪುಸ್ತಕ: ಕನ್ನಡ ಕಲಿ

**ಲೇಖಕರು:** ಲಿಂಗದೇವರು ಹಳೆಮನೆ (ಕನ್ನಡ ವಿಶ್ವವಿದ್ಯಾಲಯ,ಹಂಪಿ, ಬಳ್ಳಾರಿ)

**Kannada Kali** (A Language Text Book for the Non-Kannada Professional Degree courses by Lingadevaru Halemane)

**Published by** Publication Division, Prasaranga Kannada University, Hampi, Vidyaranya – 583276 Published year 2002